ವಿ. ಹಮೀದ್, ವಿಟ್ಲ

ಸಿನಿಮಾ ನೋಡೋಣ ಬಾ ಎಂದು ಕರೆದರೆ ಪ್ರೇಯಸಿ ನಿರಾಕರಿಸುತ್ತಾಳಲ್ಲಾ...?



ಸೈಕಾಲಜಿ ಸ್ಟೂಡೆಂಟಂತೆ. ನಿಮ್ಮ ಬುದ್ಧೀನ ಕರೆಕ್ಟಾಗಿ ಸ್ಟಡಿ ಮಾಡಿದ್ದಾಳಂತೆ.

ಎಂ.ಎಸ್. ಉಷಾ ಪ್ರಕಾಶ್, ಮೈಸೂರು

ಗ್ರಹಣದ ಗ್ರಹಚಾರಫಲ ನನ್ನದೆಂದು ತಲೆಯ ಮೇಲೆ ಕೈಹೊತ್ತು ಕುಳಿತಿರುವ ಸೋಮಾರಿಗೆ ನಿಮ್ಮ ಸಲಹೆ?

ನಿನ್ನ ಮೌಢ್ಯವೇ ರಾಹು; ಆಲಸ್ಯವೇ ಕೇತು; ಶ್ರಮ ಅಧ್ಯಯನಗಳೇ ಚೆಂಬೆಳಕಯ್ಯ ಜಡಭರತಯ್ಯ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

ಪ್ರಪಂಚದ ಅತಿ ದೊಡ್ಡ ಪಾಪ ಯಾವುದು?

ದಷ್ಟಪುಷ್ಟವಾದ ಆಂಧ್ರದ ಯುವತಿ (ತೆಲುಗಿನಲ್ಲಿ ಪಾಪ ಎಂದರೆ ಕನ್ನಿಕೆ).

ಟಿ.ಎಂ. ಮಾನಪ್ಪ, ಶಿವಮೊಗ್ಗ

ಪುಣ್ಯಕ್ಷೇತ್ರದಂತೆ ಪಾಪಕ್ಷೇತ್ರಗಳು ಏಕಿಲ್ಲ ರಾಂಜೀ?



ಇವೆಯಲ್ಲ. ಎಲ್ಲ ಹೆರಿಗೆ ಆಸ್ಪತ್ರೆಗಳೂ (ಪುಟ್ಟ)ಪಾಪ ಕ್ಷೇತ್ರಗಳೇ.

ವ. ಉಮೇಶ ಕಾರಂತ, ಮಂಗಳೂರು

ಗುಬ್ಬಿಗಳಿಗೆ ನೀರಿಟ್ಟೆ. ಕಾಗೆಗಳು ಸ್ವಲ್ಪ ಕುಡಿದು ಚೆಲ್ಲಿದವಲ್ಲಾ...?

ಸರ್ಕಾರಿ ಗುಣ! ಬರ ಪರಿಹಾರ ಪಡೆಯಬೇಕಾದ್ದು ರೈತ, ಉಡೀಸ್ ಮಾಡುವುದು ಮಂತ್ರಿ.

ಆರತಿ ಘಟಿಕಾರ್, ಬೆಂಗಳೂರು

ರಾಜಕಾರಣಿಗಳ ಸ್ನೇಹಕ್ಕೂ ವಾರಂಟಿ ಪೀರಿಯಡ್ ಇರುತ್ತದೆಯೆ?

war ಮತ್ತು anti (ವಿರೋಧಿ) ಪೀರಿಯಡ್‌ಗಳಂತೂ ಇರುತ್ತವೆ.

ನರಸಿಂಹ ಪೈ, ಕಾಸರಕೋಡ

ಹೆಣ್ಣು ಒಲಿದರೆ ನಾರಿ, ಮುನಿದರೆ ಮಾರಿ. ಗಂಡು...?

ದುಡಿದರೆ ಹೋರಿ, ಕುಡಿದರೆ ಮೋರಿ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ನ್ಯಾಯ ತುಂಬಾ ಬೆಲೆಯುಳ್ಳದ್ದು ಎನಿಸುವುದು ಯಾವಾಗ?

ಕೇಸ್ ನಡೆಸಲು ಫೇಮಸ್ ಲಾಯರನ್ನು ನೇಮಿಸಿಕೊಂಡಾಗ.

ಎಚ್. ಆನಂದ್‌ಕುಮಾರ್, ಚಿತ್ರದುರ್ಗ

ಸಂಸ್ಕಾರಕ್ಕೂ, ಸಂಸಾರಕ್ಕೂ, ಸಂನ್ಯಾಸಿಗೂ ನಂಟಿನ ಪಟ್ಟು ಇದೆಯಂತೆ. ಅದೇನು ರಾಮ್‌ಶಿವಾ?

'ಕಾ' ಅಕ್ಷರವೇ ಸಿವಾ ಕಾಪಿಟ್ಟರೆ ಸಂಸ್ಕಾರ; ಕಾವಿದ್ದರೆ ಸಂಸಾರ, ಕಾವಿಯುಟ್ಟರೆ ಸನ್ಯಾಸ.

ಬೂಕನಕೆರೆ ವಿಜೇಂದ್ರ, ಮೈಸೂರು

ಇಲ್ಲೊಬ್ಬ ಸಾವು ಸಮೀಪಿಸುತ್ತಿದ್ದರೂ ನಗುನಗುತ್ತಿರುತ್ತಾನಲ್ಲಾ...?

ಫೋಟೋದಲ್ಲಿ ನಗುಮುಖ ಇರಬೇಕಲ್ಲ. ಯಮನ ಜೊತೆ ಸೆಲ್ಫಿ ತೆಗೆಸಿಕೊಳ್ಳಬೇಕೆಂದಿದ್ದಾನಂತೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಕಲೆ ಅನ್ನುವುದು ಅನುಕರಣೆಯೆ?

'ಊಹೂಂ. ಒಂದು ಕಲೆ ಇದ್ದಂತೆ ಇನ್ನೊಂದಿರಲ್ಲ' ಎಂದನಾ ಡ್ರೈಕ್ಲೀನರ್.

ಎ.ವಿ. ಲಕ್ಷ್ಮಿ, ನರಗುಂದ

ಇನ್ನೇನು ಸ್ವರ್ಗಕ್ಕೆ ಮೂರೇ ಗೇಣು ಅನ್ನುವ ಭಾವನೆ ಯಾವಾಗ ಬರುತ್ತೆ ಗುರು?

ಯಾವುದೇ ತೀವ್ರ ಬಾಧೆಗೆ ಥಟ್ಟನೆ ಬಿಡುಗಡೆ ಸಿಕ್ಕಿದಾಗ.

ಗುರು, ಕೋಟೇಶ್ವರ

ತಾಳಿ ಕಟ್ಟುವಾಗ ಮೂರು ಗಂಟು ಹಾಕಲೇಬೇಕು. ಏಕೆ ರಾಮ್‌ಜೀ?

ಸ್ವಂತಕ್ಕೊಂದು, ಸಂಸಾರಕ್ಕೊಂದು, ಸಮಾಜಕ್ಕೊಂದು. ಇವೆಲ್ಲವೂ ಇದ್ದರೆ ಮಾತ್ರ ಕುಟುಂಬ!

## ಬಹುಮಾನಿತ ಪ್ರಶ್ನೆ

ಬಿ. ಚಂದ್ರೇಗೌಡ, ಬೆಂಗಳೂರು

ಹೆಂಡತಿಯ ಮಾತು ಕೇಳುವವನನ್ನು ಕೀಳಾಗಿ ಕಾಣುವುದು ಸರಿಯೆ?

ಊಹೂಂ. 'ಆರ್ಟ್ ಆಫ್ ಲಿವಿಂಗ್' ತಿಳಿದವನೆಂದು ಸನ್ಮಾನಿಸುವುದೇ ಸೂಕ್ತ.

ಸಿ. ಆನಂದಪ್ಪ, ಬೆಂಗಳೂರು

ಗಂಟಿಕ್ಕಿರುವ ಮುಖದೊಳಗೆ ನಗು ತರಿಸುವ ಟಾನಿಕ್ ಯಾವುದು ಗುರುಗಳೆ?

ಒಂದಲ್ಲ, ಮೂರು ಶೃಂಗಾರ, ಸಂಗೀತ, ಹಾಸ್ಯ.

ಎನ್.ಆರ್. ತಮ್ಮಯ್ಯಶೆಟ್ಟಿ, ಅರಸೀಕೆರೆ

ಹೆಂಗಸರಿಗೆ ಆಯಸ್ಸು ಜಾಸ್ತಿ. ಯಾಕೆ?

ಹೆಂಗಸ್ರೂಂದ್ರೆ ಗಂಡಸ್ರು ಸಾಯ್ತಾರೆ; ಹೆಂಗಸ್ರು ಹಾಗೆ ಸಾಯೋದಿಲ್ಲ.

ಬೋರೇಗೌಡ, ತಿರುಮಲನಗರ

ಜ್ಞಾನ ಮತ್ತು ಹಣಗಳಲ್ಲಿ ಯಾವುದು ಮುಖ್ಯ ಗುರುಗಳೆ?



ಜ್ಞಾನ ಗಳಿಸುವಷ್ಟು ಹಣ ಮತ್ತು ಹಣ ಉಳಿಸುವಷ್ಟು ಜ್ಞಾನ.

ಕೆ.ಎಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು

ಮಹಾತ್ಮನಿಗೂ, ಮಹರ್ಷಿಗೂ ಇರುವ ವ್ಯತ್ಯಾಸವೇನು ರಾಂ?

ತಪದ ಹಾದಿಯಲ್ಲಿ ಸಾಗುವವನು ಮಹರ್ಷಿ; ತಪ್ಪದ ಹಾದಿಯಲ್ಲಿ ಸಾಗುವವನು ಮಹಾತ್ಮ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

ಇತ್ತೀಚಿನ ಸಿನಿಮಾದಲ್ಲಿ ಪಾಂಡವರನ್ನು ಚರಿತ್ರಹೀನರೆಂದು ಕರೆದುದು ಸರಿಯೆ?

ಜಗವೆಲ್ಲ ಹಳದಿ ಎಂದು ಹೇಳುವ ಹಕ್ಕು ಕಾಮಾಲೆ ರೋಗಿಗೆ ಇದೆ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ಕನ್ನಡಿಗರೇ ತಮಿಳುನಾಡಿನ ಮುಖ್ಯಮಂತ್ರಿಯೋ, ನಾಯಕನೋ ಆಗುವದರ ರಹಸ್ಯವೇನು?

ತಮಿಳನ್ನು ರಕ್ಷಿಸಲು ಕನ್ನಡಿಗರೇ ಸರಿ ಎಂದು ಬೆಂಗಳೂರನ್ನು ಕಂಡ ತಮಿಳರಿಗೆ ತಿಳಿದಿದೆಯಂತೆ.

■ ರಾಮ್